CC.No. 378/2020PW4

ಸಾಕ್ಷಿಗೆ ದಿನಾಂಕಃ **13.09.2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿತರ ಪರ ಃಶ್ರೀ. ಕೆ ಎಸ್ ಎಸ್ ವಕೀಲರಿಂದ

ನಾನು ಪ್ರಕರಣಕ್ಕೆ ಸಂಬಂಧಿಸಿ ಠಾಣೆಗೆ ಹೋಗಿರುವುದಿಲ್ಲ. ನಾವು ಮೂಲತಃ ಕೊಡಗು ಜಿಲ್ಲೆ ಎಂದರೆ ಸರಿ. ನಮ್ಮ ಗಂಡ ವಾಚರ್ ಆಗಿ ನ ರಾ ಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ. ಸುಮಾರು 25 ವರ್ಷದಿಂದ ನಾವು ಸುಗ್ಗಪ್ಪನ ಮಠದ ಹತ್ತಿರ ವಾಸವಾಗಿರುತ್ತೇವೆ. ನಾವು 25 ವರ್ಷಗಳಿಂದ ವಾಸವಾಗಿದ್ದರಿಂದ ಅಕ್ಕಪಕ್ಕದವರು ನಮಗೆ ಪರಿಚಯರಾಗಿದ್ದು, ಅವರ ಜೊತೆ ವಿಶ್ವಾಸದಿಂದ ಇದ್ದೇವೆಂದರೆ ಸರಿ. ನನ್ನ ಗಂಡ ಕರ್ತವ್ಯದಲ್ಲಿರುವಾಗಲೇ ಮರಣ ಹೊಂದಿದ್ದರಿಂದ ಚಾಸಾ-1 ರವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ.

ಹೇಳಲಾದ ಘಟನೆ ಸಂಬಂಧ ಪೊಲೀಸರು ನಮ್ಮ ಮನೆಯ ಅಕ್ಕಪಕ್ಕದವರನ್ನು ವಿಚಾರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆ ದಿನ ಕೆಲಸಕ್ಕೆ ಹೋಗಿರುತ್ತೇನೆ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಆ ದಿನ ನಾನು ಮನೆಯ ಒಳಗಡೆ ಪಾತ್ರೆ ತೊಳೆಯುತ್ತಿದ್ದೆ. ಈ ಸಂಬಂಧ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 13.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ